ಹೊರಹೊಮ್ಮಿದೆ (ಈ ಲೇಖನ ಪ್ರಕಟಗೊಳ್ಳುವ ಹೊತ್ತಿಗೆ ಡಿಆರ್ ತೀರಿಹೋಗಿದ್ದರಿಂದ ಪೃಥ್ವಿದತ್ತ ಚಂದ್ರಶೋಭಿಯವರು ಅದನ್ನು ಆಮೂಲಾಗ್ರವಾಗಿ ಪರಿಷ್ಕರಿಸಿದರು).

ಹಲ್ಮಿಡಿ ಶಾಸನದಿಂದ ಹಿಡಿದು 19ನೇ ಶತಮಾನದವರೆಗೆ ಕನ್ನಡ ಸಾಹಿತ್ಯದ ಬರವಣಿಗೆಗಳಲ್ಲಾದ ಪಲ್ಲಟಗಳನ್ನು ಈ ಪ್ರಬಂಧ ಗುರುತಿಸಿ ವಿವರಿಸುವಂತೆ ಇನ್ನೊಂದು ಸಾಹಿತ್ಯ ಚರಿತ್ರೆಯ ತುಣುಕು ಸಿಗುವುದು ಕಷ್ಟ. ಶಾಸನ ಸಾಹಿತ್ಯದ ಸಂವೇದನೆಗಳ ಮುಂದುವರಿಕೆಯಾಗಿ ಬೆಳೆದು ಬಂದ ಪಂಪಪ್ರಣೀತ ಮಹಾಕಾವ್ಯದ ಪ್ರಕಾರ ಮುಂದೆ ವಚನಕಾರರಿಂದ ತಿರಸ್ಕರಿಸಲ್ಪಟ್ಟದ್ದು; ವಚನಕಾರರ ನಂತರ ಹರಿಹರ, 'ಮಹಾಕಾವ್ಯ' ಮತ್ತು 'ವಚನಗಳ' ಮಾದರಿಗಳನ್ನು ಬಿಟ್ಟುಕೊಟ್ಟು, ರಗಳೆಗಳನ್ನು ಉಪಯೋಗಿಸಿದ್ದು; ತದನಂತರ ಷಟ್ಪದಿ, ಸಾಂಗತ್ಯದಂತಹ ಛಂದೋರೂಪಗಳು ಮೇಲುಗೈ ಪಡೆದದ್ದು ಮೊದಲಾದ ವಿದ್ಯಮಾನಗಳು ಕನ್ನಡ ಸಾಹಿತ್ಯಕ ಪರಂಪರೆ ಕಂಡ ಮುಖ್ಯ ಪಲ್ಲಟಗಳೆಂದು ಗುರುತಿಸಿ, ಅವುಗಳನ್ನು ತತ್ಕಾಲದ ರಾಜಕೀಯ ಮತ್ತು ಧಾರ್ಮಿಕ ಹಿನ್ನೆಲೆಯಲ್ಲಿ ಡಿಆರ್ ವಿವರಿಸುತ್ತಾರೆ.

ಇಲ್ಲಿ ಡಿಆರ್ ಕನ್ನಡ ಸಾಹಿತ್ಯ ಸಂಸ್ಕೃತಿಗೆ ಸಂಬಂಧಿಸಿ ಮಂಡಿಸುವ ಎಲ್ಲ ವಾದಗಳನ್ನು ನಾವು ಒಪ್ಪಬೇಕಾಗಿಲ್ಲ. ಆದರೆ ಅವರ ಓದಿನ ಆಳ ಅಗಲ, ಸಾಹಿತ್ಯ ಚರಿತ್ರೆ ಕುರಿತು ಆಲೋಚನೆ ಮಾಡುವ ವಿಧಾನ ನಮ್ಮ ಗಮನ ಸೆಳೆಯಲೇಬೇಕು. ಒಂದೆರಡು ಓದುಗಳಿಗೆ ದಕ್ಕದಂತಹ ಈ ಲೇಖನ ತಾಳ್ಮೆಯಿಂದ ವಿದ್ಯಾರ್ಥಿಗಳ ಜೊತೆ ಓದಲು ಯೋಗ್ಯವಾದ ಆಕರ ಪಠ್ಯವಾಗಿದೆ; ವಿದ್ಯಾರ್ಥಿಗಳಿಗೆ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಅಗತ್ಯವಾದ ಪ್ರವೇಶವನ್ನು ಒದಗಿಸಲು ಹೇಳಿ ಮಾಡಿಸಿದ ಬರಹವಿದು. ಡಿಆರ್ ಅವರ ವಾದಗಳನ್ನು ಒಪ್ಪಿಸಲು ಅಲ್ಲ; ಓದು, ಬರಹ, ಆಲೋಚನಾ ಕ್ರಮಗಳನ್ನು ಮತ್ತು ಗಮನಿಸುವ ಕಲೆಯನ್ನು ಕಲಿಯಲು ವಿದ್ವಾಂಸರೂ ಮತ್ತೆ ಮತ್ತೆ ಓದಲೇಬೇಕಾದ ಪ್ರಬಂಧವಿದು.

1996ರಲ್ಲಿ ಪ್ರಕಟವಾದ ವಿಮರ್ಶಾ ಲೇಖನಗಳ ಸಂಕಲನ 'ಸಾಹಿತ್ಯ ಕಥನ' ಡಿಆರ್ ಅವರ ಬೌದ್ಧಿಕ ಜೀವನದಲ್ಲಿ ಹೊಸ ಮೆಟ್ಟಿಲನ್ನು ದಾಖಲಿಸುವ ಕೃತಿ. 1983ರಲ್ಲಿ ಪ್ರಕಟವಾದ ಮೊದಲ ವಿಮರ್ಶಾ ಸಂಕಲನದಿಂದ ಇಲ್ಲಿಯವರೆಗೆ ಡಿಆರ್ ಅವರ ಬೌದ್ಧಿಕ, ಭಾವನಾತ್ಮಕ ವ್ಯಕ್ತಿತ್ವಗಳಲ್ಲಿ ಆದ ಬದಲಾವಣೆಗಳನ್ನು ಈ ಕೃತಿಯಲ್ಲಿ ಕಾಣಬಹುದು. 'ಮಾನವ ಪ್ರಗತಿಯ ಅಂತಿಮ ಅಳತೆಗೋಲು ಪಶ್ಚಿಮವೇ' ಎಂಬ ನಂಬಿಕೆ; 'ಶೂದ್ರಾತಿಶೂದ್ರರಿಗೆ ಸ್ವಂತ ಸಾಂಸ್ಕೃತಿಕ ಪರಂಪರೆಯೇ ಇಲ್ಲ' ಎನ್ನುವ ವೈಚಾರಿಕ ಪೂರ್ವಗ್ರಹ; 'ಶಿಷ್ಟ ಮತ್ತು ಜನಪ್ರಿಯ' ಎಂಬ ಕೃತಕ ವ್ಯತ್ಯಾಸ ಈ ಎಲ್ಲವುಗಳನ್ನು ಹೊಡೆದು ಹಾಕುವುದು ಇಲ್ಲಿಯ ವಿಚಾರಗಳ ತಾತ್ವಿಕ ತಳಹದಿಯಾಗಿದೆ. ವಸಾಹತೀಕರಣ ಸಿದ್ಧಾಂತದ ವಿಶ್ಲೇಷಣೆಯಿಂದ ಹಿಡಿದು ಹಿಂಸೆ, ಜನಪ್ರಿಯ ಸಿನಿಮಾಗಳ ಕಲಾಮೀಮಾಂಸೆಯಂತಹ ವಿಷಯಗಳ ಕುರಿತು ಚಿಂತಿಸುವ ಕ್ರಮಬದ್ಧ ಅಕಡೆಮಿಕ್ ಬರವಣಿಗೆಗಳಿವು.

ಡಿಆರ್ ನಿಧನಾನಂತರ ಅಗ್ರಹಾರ ಕೃಷ್ಣಮೂರ್ತಿ ಸಂಗ್ರಹಿಸಿ ಪ್ರಕಟಿಸಿದ 'ಸಂಸ್ಕೃತಿ ಕಥನ' (2002) ವಿವಿಧ ಪತ್ರಿಕೆಗಳಿಗೆ ಡಿಆರ್ ಬರೆದ, ಕೊಂಚ ಲಘು ಎನ್ನಬಹುದಾದ ಬರಹಗಳನ್ನೊಳಗೊಂಡ ಲೇಖನಗಳ ಸಂಗ್ರಹ. ಮಾರ್ಕ್ಸ್, ಅಂಬೇಡ್ಕರ್ ಮತ್ತು ದಲಿತ ಚಿಂತನೆಗಳಿಂದ ಹಿಡಿದು ಪರಿಸರ, ಕನ್ನಡತನ, ವ್ಯಕ್ತಿಚಿತ್ರಗಳು, ಪ್ರವಾಸ ಕಥನದ ತುಣುಕು ಇತ್ಯಾದಿಗಳನ್ನು ಈ ಸಂಕಲನದಲ್ಲಿ ಕಾಣಬಹುದು. ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳ ವಿಶ್ಲೇಷಣೆ ಮಾಡುತ್ತಾ, ಇಲ್ಲಿಯ ಲೇಖನಗಳು ಕನ್ನಡ ಜಗತ್ತಿಗೆ ಸಾರ್ಥಕ ಬದುಕನ್ನು ಕಲ್ಪಿಸುವುದು ಹೇಗೆಂದು ಚಿಂತಿಸುತ್ತವೆ.

1993ರ ಹೊತ್ತಿಗೆ ಸಿಮ್ಲಾದ ಐ.ಐ.ಎ.ಎಸ್. ನಲ್ಲಿ ವಸಾಹತುಶಾಹಿ ಅನುಭವಗಳನ್ನು ಕುರಿತು ಅಧ್ಯಯನ ಮಾಡುವಾಗ 'ವಿಸ್ಮೃತಿ' ಎಂಬ ಪರಿಕಲ್ಪನೆ ಡಿಆರ್ ಅವರಿಗೆ ಹೊಳೆಯುತ್ತದೆ. ಯಾವುದು ಜಾಗತಿಕಮಟ್ಟದಲ್ಲಿ ಎಡ್ವರ್ಡ್ ಸೈಯಿದ್ ಪ್ರಣೀತ ವಸಾಹತೋತ್ತರ ಚಿಂತನೆ ಎಂದು ಪ್ರಚಲಿತವಾಗಿತ್ತೋ ಮತ್ತು ಯಾವುದನ್ನು ಜಿ.ಎನ್. ದೇವಿಯವರು ಆಮ್ನೇಸಿಯಾ (ಸಾಂಸ್ಕೃತಿಕ ಮರೆವು) ಎಂಬ ಪರಿಕಲ್ಪನೆಯಾಗಿ ಮುಂದಿಟ್ಟಿದ್ದರೋ ಅವುಗಳಂತೆ